ಆ) ಈ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ದೃಷ್ಟಿಯಿಂದ ಈ ಸಂಸ್ಥೆಯ ಸ್ಥಾಪನೆಗೆ ಸಂಬಂಧಪಟ್ಟಂತೆ ಒಂದು ಯೋಜನಾವರದಿಯನ್ನು ತಯಾರಿಸಲು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಿದ್ದು, ಅವರು ಸಲ್ಲಿಸಿದ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರಿನ ಸಹಕಾರಿ ಗ್ರಾಹಕರ ಮಹಾಮಂಡಲಿಯ ಬಗ್ಗೆ

೪೦೬. ಶ್ರೀ ಕೆ. ಹೆಚ್. ಪಾಟೀಲ್ (ಗದಗ್) — ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಸಹಕಾರಿ ಗ್ರಾಹಕರ ಮಹಾಮಂಡಳಿ ನಿಯಮಿತ, ಬೆಂಗಳೂರು ಸಂಸ್ಥೆಯಂವರು ಕಳೆದ ೩ ವರ್ಷಗಳಿಂದ ಪ್ರತಿ ವರ್ಷ ಗಳಿಸಿದ ಲಾಭವೆಷ್ಟು ?

ಆ) ಸದರಿ ಸಂಸ್ಥೆಗೆ ಸರ್ಕಾರದವರು ೧.೯೮ ಕೋಟಿ ರೂಪಾಯಿ ಕೊಡಬೇಕಾಗಿದ್ದು ತಡ ಮಾಡಿರುವುದು ನಿಜವೇ ?

ಇ) ಅಧ್ಯಕ್ಷರ ಆಯ್ಕೆಯಲ್ಲಿ ಪ್ರಜಾಪ್ರಭುತ್ವ ಪದ್ಧತಿಯನ್ನು ಜಾರಿಗೊಳಿಸಲು ಅಡ್ಡಿಯಾಗಿರುವುದು ನಿಜವೇ ?

ಶ್ರೀಮತಿ ವಂನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ೧) ೧೯೮೬–೮೭ ... ರೂ. ೪,೯೮,೩೬-೩೧

೨) ೧೯೮೭–೮೮ ... ರೂ. ೧೯,೯೪,೭೪೪-೩೩

೩) ೧೯೮೮–೮೯ ... ರೂ. ೫೦,೭೨,೨೦೦-೦೦
(೩೧–೩–೮೯ ರ ವರೆಗೆ)

ಆ) ಹೌದು ಸರ್ಕಾರದಿಂದ ಒಟ್ಟು ರೂ. ೨೦೧.೦೫ ಲಕ್ಷಗಳು ಬರಬೇಕಾಗಿದೆ.

ಇ) ಇಲ್ಲ.

ರಾಜ್ಯ ಸಹಕಾರಿ ನೌಕರರ ಬಗ್ಗೆ

೭೬. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಾದರೆ ಸರ್ಕಾರದವರು ಅವರ ಬೇಡಿಕೆಗಳ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಇ) ಸಹಕಾರ ಸಂಘಗಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ಆಲೋಚನೆ ಸರ್ಕಾರದವರಿಗೆ ಇದೆಯೇ ?

ಶ್ರೀಮತಿ ವಂನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರು ವಂಡಿಸಿರುವ ಬೇಡಿಕೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ.

ಆ) ಈ ನೌಕರರ ಬೇಡಿಕೆಗಳ ಅಧ್ಯಯನ ಕುರಿತಂತೆ ವರದಿ ಸಲ್ಲಿಸಲು ಶ್ರೀ ಜಿ. ಎಸ್. ಹೆಗ್ಗಡೆ ಅಜ್ಜೀಬಾಳ, ಇವರ ನೇತೃತ್ವದಲ್ಲಿ ಆಯೋಗ ರಚಿಸಿ ವರದಿ ನೀಡಲು ನೇಮಿಸಲಾಗಿತ್ತು. ಸದರಿ ವರದಿಯ ಶಿಫಾರಸ್ಸುಗಳ ಮತ್ತು ನೌಕರರ ಬೇಡಿಕೆಗಳು ಇವುಗಳ ಪ್ರಕಾರ ತಗಲಬಹುದಾದ ವೆಚ್ಚ ಹಾಗೂ ಇತರೆ ವಿಷಯಗಳ ಬಗ್ಗೆ ಕೂಲಂಕಷವಾಗಿ ಮಾಹಿತಿ ಸಂಗ್ರಹಿಸಿ ಪರಿಶೀಲಿಸಲಾಗುತ್ತಿದೆ.

ಇ) ಸಹಕಾರಿ ಸಂಘಗಳು ಪ್ರಜಾಸತ್ತಾತ್ಮಕ ಹಾಗೂ ಸ್ವಯಂ ಆಡಳಿತ ಸಂಸ್ಥೆಗಳಾಗಿರುವುದರಿಂದ ಸದರಿ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವುದು ಸರ್ಕಾರದ ಆಲೋಚನೆಯಲ್ಲಿಲ್ಲ.